



ಅರುಣ ಪಿ. ಭಟ್ಟ

# ವಾರಭವಿಷ್ಯ: 09.05.2024ರಿಂದ 15.05.2024ರವರೆಗೆ




ವಾರದ ಆರಂಭದಲ್ಲಿ ವೃತ್ತಿ ಜೀವನದಲ್ಲಿ ಕೀರ್ತಿ ಲಭಿಸುತ್ತದೆ. ವೈಯಕ್ತಿಕ ಜೀವನದಲ್ಲೂ ಉತ್ತಮ ಸಮಯ. ವಿದ್ಯಾರ್ಥಿಗಳು ಹೆಚ್ಚು ಜಾಗರೂಕರಾಗಿ ಇರಬೇಕು. ನಿಮ್ಮ ಗಮನ ಬೇರೆಡೆ ಹೋಗದಂತೆ ನೋಡಿಕೊಂಡರೆ ಮಾತ್ರ ಉತ್ತಮ ಫಲಿತಾಂಶ ನಿರೀಕ್ಷೆ ಮಾಡಲು ಸಾಧ್ಯ. ಖರ್ಚಿನ ಪ್ರಮಾಣ ಹೆಚ್ಚಾಗುತ್ತದೆ. ಇದರಿಂದ ಚಿಂತೆಗೆ ಗುರಿಯಾಗುತ್ತೀರಿ. ಶುಭದಿನ 11. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ವಾರದ ಆರಂಭದಲ್ಲಿ ದೇವತಾ ಆರಾಧನೆ ಕಡೆಗೆ ನಿಮ್ಮ ಗಮನ ಹೆಚ್ಚಿರುತ್ತದೆ. ಉನ್ನತ ಶಿಕ್ಷಣ ಮಾಡುತ್ತಿರುವವರಿಗೆ ಉತ್ತಮ ಪ್ರಗತಿ. ಮಾಮೂಲಿ ಕೆಲಸಗಳ ಹೊರತಾಗಿ ಇತರ ವಿಚಾರಗಳ ಕಡೆಗೆ ನಿಮ್ಮ ಗಮನ ಹೋಗುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ವೇತನದಲ್ಲಿ ಏರಿಕೆಯಾಗುವ ಸಾಧ್ಯತೆ ಇದೆ. ವೈಯಕ್ತಿಕ ಸಂಬಂಧದಲ್ಲಿ ಸಂತಸದ ಕ್ಷಣಗಳನ್ನು ಕಳೆಯಲಿದ್ದೀರಿ. ಶುಭದಿನ 14. ಸೌಂದರ್ಯ ಲಹರಿ ಪಠಿಸಿರಿ.




ವಾರದ ಆರಂಭದಲ್ಲಿ ಕೌಟುಂಬಿಕ ವಿಚಾರದಲ್ಲಿ ಕೆಲವು ಕಷ್ಟಗಳು ಎದುರಾಗಲಿವೆ. ನಿಮ್ಮ ಪ್ರಯತ್ನ ಭವಿಷ್ಯದ ಯಶಸ್ಸಿಗೆ ಸಹಕಾರಿ ಆಗಿರುತ್ತದೆ. ಸಂಗಾತಿ ಜೊತೆಗೆ ನಡೆಸುವ ಮಾತುಕತೆ ಉದ್ವಿಗ್ನತೆಗೆ ಕಾರಣವಾಗಬಹುದು. ಉದ್ಯೋಗ ಸ್ಥಳದಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಇನ್ನು ಇದೇ ಅವಧಿಯಲ್ಲಿ ದೂರ ಪ್ರಯಾಣ ಮಾಡುವ ಸಾಧ್ಯತೆ ಇದೆ. ಶುಭದಿನ 13. ಹನುಮಾನ್ ಚಾಲಿಸ್ ಓದಿರಿ.




ವೈವಾಹಿಕ ಜೀವನದಲ್ಲಿ ಸಂತಸ. ಸಂಗಾತಿ ಜೊತೆ ಉತ್ತಮ ಬಾಂಧವ್ಯ ಇರಲಿದೆ. ಉದ್ಯೋಗ ಕ್ಷೇತ್ರದಲ್ಲಿ ಯಶಸ್ಸು ದೊರೆಯಲಿದೆ. ಆತ್ಮವಿಶ್ವಾಸ ಹೆಚ್ಚಾಗಲಿದೆ. ಸನ್ಮಾನಗಳು ಆಗಬಹುದಾದ ಸಾಧ್ಯತೆಗಳಿವೆ. ಇದರಿಂದ ಸಂತೋಷ ಹೆಚ್ಚಲಿದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಕುಟುಂಬ ಸದಸ್ಯರ ನಡವಳಿಕೆಯಿಂದ ಗೊಂದಲಕ್ಕೆ ಸಿಲುಕಿಕೊಳ್ಳುತ್ತೀರಿ. ಶುಭದಿನ 15. ಈಶ್ವರನಿಗೆ ರುದ್ರಾಭಿಷೇಕ ಮಾಡಿರಿ.




ವಾರದ ಆರಂಭದಲ್ಲಿ ಪ್ರಗತಿ ಇದೆ. ದೂರ ಪ್ರಯಾಣ ಮಾಡಬೇಕಾಗಬಹುದು. ಆದ್ಯತೆ ಮೇಲೆ ಕೆಲಸ ಕಾರ್ಯಗಳನ್ನು ಪೂರೈಸುವುದಕ್ಕೆ ನಿರ್ಧಾರ ಮಾಡುತ್ತೀರಿ. ಆಹಾರ ನೀರು ಸೇವನೆ ಬಗ್ಗೆ ಹೆಚ್ಚು ಲಕ್ಷ್ಯ ಇರಲಿ. ಭವಿಷ್ಯದ ಒಳಿತನ್ನು ಗಮನದಲ್ಲಿ ಇಟ್ಟುಕೊಂಡು ಯೋಜನೆಯನ್ನು ನಿರ್ಧರಿಸುತ್ತೀರಿ. ಇದರಿಂದ ನಿಮ್ಮ ಉದ್ದೇಶ ಈಡೇರುತ್ತದೆ. ಶುಭದಿನ 15. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಮಕ್ಕಳ ಏಳ್ಗೆ, ಪ್ರಗತಿಯಿಂದ ಸಂತಸ, ಹೆಮ್ಮೆ ಉಂಟಾಗುತ್ತದೆ. ಅವರ ಭವಿಷ್ಯದ ಬಗ್ಗೆ ಹೆಚ್ಚು ಗಮನ ನೀಡುತ್ತೀರಿ. ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಯಶಸ್ಸು ದೊರೆಯಲಿದೆ. ವಾರದ ದ್ವಿತೀಯಾರ್ಧದಲ್ಲಿ ಆದಾಯ ಅತ್ಯುತ್ತಮವಾಗಿ ಇರುತ್ತದೆ. ವೈಯಕ್ತಿಕ ಸಂಬಂಧದಲ್ಲಿ ಬಾಂಧವ್ಯ ಗಟ್ಟಿಯಾಗಿರುತ್ತದೆ. ಯಾರನ್ನೂ ವಿನಾಕಾರಣ ನಂಬಿ, ಹಣ ನೀಡಬೇಡಿ. ಶುಭದಿನ 10. ವಿಷ್ಣು ಸಹಸ್ರನಾಮ ಪಠಿಸಿರಿ.




ಉದ್ಯಮಿಗಳು ವ್ಯಾಪಾರಸ್ಥರಿಗೆ ಉತ್ತಮ ಸಮಯ. ಇದರಿಂದ ಸಂತಸ ಉಂಟಾಗಲಿದೆ. ಈ ಅವಧಿಯಲ್ಲಿ ಆರೋಗ್ಯವೂ ಉತ್ತಮವಾಗಿರುತ್ತದೆ. ಉದ್ಯೋಗಿಗಳಿಗೆ ದೊರೆಯುತ್ತಿರುವ ಸವಲತ್ತು ಮತ್ತಷ್ಟು ವಿಸ್ತರಣೆಯಾಗಲಿದೆ. ವಾರದ ಮಧ್ಯ ಭಾಗದಲ್ಲಿ ಕೆಲಸ ಕಾರ್ಯಗಳು ವಿಪರೀತ ವೇಗವಾಗಿ ಪೂರ್ಣಗೊಳ್ಳುತ್ತವೆ. ಆದಾಯ ಹೆಚ್ಚು ಮಾಡಿಕೊಳ್ಳುವುದಕ್ಕೂ ಅತ್ಯುತ್ತಮ ಸಮಯ. ಶುಭದಿನ 11. ಲಿಂಗಾಷ್ಟಕ ಪಠಿಸಿರಿ.




ವಾರದ ಶುರುವಿನಲ್ಲಿ ನಿಮ್ಮ ಸಾಮರ್ಥ್ಯ ಹೆಚ್ಚಲಿದೆ. ಕೌಟುಂಬಿಕ ಜೀವನದಲ್ಲೂ ಅದೃಷ್ಟ ನಿಮ್ಮ ಪಾಲಿಗೆ ಇರಲಿದೆ. ಹಿರಿಯರಿಗೆ ಆರೋಗ್ಯ ಸಮಸ್ಯೆಗಳು ಕಾಡಬಹುದು. ಆದರೆ ವಾರಾಂತ್ಯದ ಹೊತ್ತಿಗೆ ಚೇತರಿಕೆ ಕಾಣಿಸಿಕೊಳ್ಳಲಿದೆ. ವಾರದ ದ್ವಿತೀಯಾರ್ಧದಲ್ಲಿ ಆದಾಯದಲ್ಲಿ ಹೆಚ್ಚಳವಾಗಲಿದೆ. ವೈಯಕ್ತಿಕ ಸಂಬಂಧದಲ್ಲಿ ನಿಮಗೆ ಸಂತೋಷವಾಗಲಿದೆ. ಶುಭದಿನ 12. ಚಂಡಿ ಪಾರಾಯಣ ಮಾಡಿರಿ.




ವಾರದ ಶುರುವಿನಲ್ಲಿ ಭೂಮಿ ಖರೀದಿ ಪ್ರಕ್ರಿಯೆಯಲ್ಲಿ ತೊಡಗಲಿದ್ದೀರಿ. ಈಗಾಗಲೇ ವ್ಯಾಜ್ಯಗಳು ಇದ್ದಲ್ಲಿ ಅವುಗಳನ್ನು ನಿವಾರಿಸಿಕೊಳ್ಳಲು ಸಫಲರಾಗುತ್ತೀರಿ. ಸಂತೋಷ ಪಡುವುದಕ್ಕೆ ಬೇಕಾದ ಸೌಕರ್ಯಗಳನ್ನು ಪಡೆಯಲಿದ್ದೀರಿ. ಹಣಕಾಸು ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಮೂಡಲಿವೆ. ಕೆಲಸ ಪೂರ್ಣಗೊಳಿಸುವ ಅನಿವಾರ್ಯತೆ ಬರಬಹುದು. ಶುಭದಿನ 14. ಗಣಪತಿ ಸುಬ್ರಮಣ್ಯ ಜಪ ಮಾಡಿರಿ.




ವಾರದ ಶುರುವಿನಲ್ಲಿ ವೃತ್ತಿ ಜೀವನದಲ್ಲಿ ದೊರೆಯುವ ಅವಕಾಶಗಳನ್ನು ಸದ್ಬಳಕೆ ಮಾಡುವ ಕಡೆಗೆ ನಿಮ್ಮ ಗಮನ ಇರುತ್ತದೆ. ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯಲಿದೆ. ಭೂಮಿ ಖರೀದಿಗೆ ಇದು ಸೂಕ್ತ ಸಮಯ. ಹವಾಮಾನ ಕಾರಣಗಳಿಗೆ ದೈಹಿಕ ಬಾಧೆಗಳು ಕಾಡಬಹುದು. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿ ಜೊತೆಗೆ ಉತ್ತಮ ಸಮಯ ಕಳೆಯಲಿದ್ದೀರಿ. ಶುಭದಿನ 12. ನವದುರ್ಗಾ ಆರಾಧನೆ ಮಾಡಿರಿ.




ನೀವು ಅಂದುಕೊಂಡ ಕೆಲಸಗಳನ್ನು ಶುರು ಮಾಡುವುದಕ್ಕೆ ಸೂಕ್ತ ಸಮಯ. ನಿಮ್ಮ ಪ್ರತಿಭೆಯನ್ನು ಹೆಚ್ಚಿಸಿಕೊಳ್ಳಲು ಅಗತ್ಯವಾದ ವೇದಿಕೆಯನ್ನು ಸಿದ್ಧ ಮಾಡಿಕೊಳ್ಳುತ್ತೀರಿ. ನಿಮ್ಮ ವಿವೇಚನಾಶಕ್ತಿ ಹಾಗೂ ಧೈರ್ಯ ಅಗಾಧ ಪ್ರಮಾಣದಲ್ಲಿ ಹೆಚ್ಚಲಿದೆ. ಆರೋಗ್ಯ ಸಮಸ್ಯೆಗಳು ಸ್ವಲ್ಪ ಮಟ್ಟಿಗೆ ಕಾಡಬಹುದು. ವೈಯಕ್ತಿಕ ಸಂಬಂಧದಲ್ಲಿ ಬಾಂಧವ್ಯ ಗಟ್ಟಿಯಾಗಲಿದೆ. ಶುಭದಿನ 14. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.




ಕೆಲಸ ಕಾರ್ಯಗಳನ್ನು ಪೂರೈಸಲು ಶ್ರಮಿಸಲಿದ್ದೀರಿ. ನಿಮ್ಮ ಶ್ರಮಕ್ಕೆ ತಕ್ಕಂತೆ ಫಲಿತಾಂಶ ದೊರೆಯಲಿದೆ. ಸಂಗಾತಿ ಜೊತೆಗಿನ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ಸಣ್ಣ ಪುಟ್ಟ ವಿಚಾರಗಳಿಗೂ ಬಿಕ್ಕಟ್ಟು ಎದುರಾಗಲಿದೆ. ಉದ್ಯಮಿಗಳು ಚಟುವಟಿಕೆಯಿಂದ ತೊಡಗಿಕೊಳ್ಳುವುದರಿಂದ ಹಲವು ಬಗೆಯಲ್ಲಿ ಲಾಭ ಕಾಣಲು ಸಾಧ್ಯವಾಗಲಿದೆ. ಶುಭದಿನ 10. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.